International Journal of Kannada Research 2017; 3(1): 92-93

International Journal of Kannada Research
www.kannadajournal.com

**ISSN: 2454–5813**
IJSR 2017; 3(1): 92-93
© 2017 IJKS
www.kannadajournal.com
Received: 17-11-2016
Accepted: 18-12-2016

**ಪ್ರೇಮನಾಥ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ,
ಗು.ವಿ. ಕಲಬುರಗಿ

# ಮಾದಾರ ಚೆನ್ನಯ್ಯನ ವಚನಗಳಲ್ಲಿ ದಲಿತ ಸಂವೇದನೆ

**ಪ್ರೇಮನಾಥ**

ಸಮಾಜದ ಕೆಳಸಮುದಾಯದ ಅಸ್ಪೃಶ್ಯ ಜನಾಂಗದಿಂದ ಬಂದ ವಚನಕಾರರಲ್ಲಿಯೇ ಮಾದರ ಚೆನ್ನಯ್ಯ ಮಹತ್ವದ ವಚನಕಾರ. ಅಪ್ಪನು ನಮ್ಮ ಮಾದಾರ ಚೆನ್ನಯ್ಯನೆಂದು ಬಸವಣ್ಣ ತನ್ನ ವಚನದಲ್ಲಿ ಹೃದಯ ತುಂಬಿ ಹೇಳಿದ್ದಾರೆ. ಮಾದಾರ ಚೆನ್ನಯ್ಯನ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣುತ್ತೇವೆ. ಕ್ರಿ.ಶ. 1200ರ ಅಬ್ಬಲೂರ ಶಾಸನದಲ್ಲಿ ಹಾಗೂ ಜಗಳೂರು ಕಲ್ಲೇದೆವಪುರದ ಶಾಸನದಲ್ಲಿಯೂ ಚೆನ್ನಯ್ಯನ ಬಗೆಗೆ ಉಲ್ಲೇಖವಿರುವದು ಕಂಡುಬರುತ್ತದೆ.  ರಗಳೆಯ ಕವಿ ಎಂದೇ ಖ್ಯಾತರಾದ ಹರಿಹರನು ಚೆನ್ನಯ್ಯನನ್ನು ಕುರಿತು ಬರೆದ ಮಾದಾರ ಚೆನ್ನಯ್ಯನ ರಗಳೆಯು ಮಹತ್ವದ ಆಕರವಾಗಿದೆ. ಕರಿಕಾಲ ಚೋಳನ ಸಮಕಾಲಿನನಾಗಿದ್ದ ಚೆನ್ನಯ್ಯನ ಮನೆಯಲ್ಲಿ ಶಿವನು ಅಂಬಲಿಯನ್ನು ಕುಡಿದಿರುವಂತಹ ಪ್ರಸಂಗವನ್ನು ಹರಿಹರ ಕವಿಯು ತನ್ನ ರಗಳೆ ಸಾಹಿತ್ಯ ಪ್ರಕಾರದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ. ಅರಸನಾಗಿದ್ದ ಕರಿಕಾಲ ಚೋಳನ ಮೃಷ್ಟಾನ್ನವನ್ನು ಮುಟ್ಟದ ಶಿವನು ಮಾದಾರ ಚೆನ್ನಯ್ಯನ ಅಂಬಲಿಗಾಗಿ ಹಾತೊರೆದು ಬರುವುದು ತುಂಬ ಮಹತ್ವದ ವಿಷಯವಾಗಿದೆ. ರಾಜನ ಅರಮನೆಗೆ ಹೋಗದ ಶಿವ ಮಾದಾರ ಚೆನ್ನಯ್ಯನ ಗುಡಿಸಲಿನ ಕಡೆ ನಡೆದು ಬಂದಿರುವದನ್ನು ಅವನ ಭಕ್ತಿಯ ಸಂಕೇತವಾಗಿದೆ.

ಮಾದಾರ ಚೆನ್ನಯ್ಯ ಮಹತ್ವದ ಶರಣನಾಗಿದ್ದರಿಂದಲೇ ಬಸವಣ್ಣ ಈತನನ್ನು ಗೋತ್ರ ಪುರುಷನೆಂದು ಕರೆದಿದ್ದಾನೆ. ಚೆನ್ನಯ್ಯ ಚೋಳ ದೇಶದ ಕರಿಕಾಲ ಚೋಳನ ಅರಮನೆಯ ಕುದುರೆಗಳಿಗೆ ಹುಲ್ಲು ಹಾಕುವ ಕಾಯಕ ಮಾಡುತ್ತಿದ್ದ. ಕಲ್ಯಾಣಕ್ಕೆ ಬಂದ ನಂತರ ಪಾದರಕ್ಷೆ ಹೊಲೆಯುವ ಕುಲಕಸುಬನ್ನೆ ಮಹತ್ವದ ಕಾಯಕವನ್ನಾಗಿ ಮಾಡಿಕೊಂಡಿದ್ದ. ಈ ವಚನಕಾರ ಅರಿನಿಜಾತ್ಮರಾಮರಾಮನಾ  ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಪ್ರಸ್ತುತ ಈತನ ಹತ್ತು ವಚನಗಳು ದೊರಕಿವೆ.

ಚೆನ್ನಯ್ಯನ ವಚನಗಳಲ್ಲಿ ದಲಿತ ಸಂವೇದನೆ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿರುವದು ಕಂಡುಬರುತ್ತದೆ. ಮನುಷ್ಯ ಜಾತಿಯಲ್ಲಿ ಉಚ್ಚ-ನೀಚ ಎಂಬ ಎರಡು ಗಣಗಳಿರುತ್ತವೆಯೇ ಹೊರತು ಹೊಲೆ ಹದಿನೆಂಟು ಜಾತಿಯೆಂಬ ಕುಲಗಳಿಲ್ಲವೆಂದು ತನ್ನ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ. ಬ್ರಾಹ್ಮಣನ ಕರ್ಮಕ್ಕೊಳಗಾದವನೇ ಸಮಗಾರನೆಂದು ಹೇಳಿ ಮೇಲು-ಕೀಳು ಎಂಬುವುಗಳು ಮನುಷ್ಯನ ಗುಣಸೂಚನಗಳೇ ಹೊರತು ಜಾತಿ ಸೂಚಕಗಳಲ್ಲವೆಂದು ವಿವರಿಸಿದ್ದಾನೆ.

ಶುಕ್ಲ ಶೋಣಿತ ಮಜ್ಜೆಮಾಂಸ ಹಸಿವು ತೃಷೆ
ವ್ಯಸನ ವಿಷಯಾದಿಗಳೊಂದಿಗೆ ಭೇದ
ಮಾಡುವ ಕೃಷಿ ವ್ಯವಸಾಯ ಹಲವಲ್ಲದೆ,
ತೋರುವ ತೋರಿಕೆ ಅರಿವಾತ್ಮನೊಂದೆ ಭೇದ
ಆವ ಕುಲವಾದಡೂ ಅರಿದಲ್ಲಿಯೆ ಪರತತ್ವಭಾವಿ
ವರೆದಲ್ಲಿಯೆ ಮಲಮಾಯೂ ಸಂಬಂಧಿ
ಇಂತೀ ಉಭಯನರಿದು ಮರೆಯಲಿಲ್ಲ.
(ಸ.ವ. ಸಂಪುಟ 4, ಪುಟ 419, ವ 1164)

ಮಾನವನು ತನ್ನ ಜೀವನೋಪಾಯಕ್ಕೆ ಮಾಡುವ ಕೃಷಿ-ವ್ಯವಸಾಯ ವೃತ್ತಿಗಳು ಬೇರೆ ಬೇರೆಯಾದರು ಮೂಲತಃ ಮನುಷ್ಯ ಒಂದೇ ಎಂಬ ಸತ್ಯವನ್ನು ಚೆನ್ನಯ್ಯ ಈ ವಚನದಲ್ಲಿ ಪ್ರತಿಪಾದಿಸಿದ್ದಾನೆ. ಚೆನ್ನಯ್ಯನು ಈ ವಚನದಲ್ಲಿ ಜಾತಿವ್ಯವಸ್ಥೆಯನ್ನು ತಿರಸ್ಕರಿಸಿದ್ದಾನೆ. ಕುಲಕಿಂತ ಅರಿವಿಗೆ ಜ್ಞಾನಕ್ಕೆ ಮಹತ್ವ ಕೊಡಬೇಕು, ಅದಕ್ಕೆ ಗೌರವಿಸಬೇಕು ಎಂಬ ಸಂದೇಶ ಕಾಣುತ್ತೇವೆ. ಅಂತೆಯೆ ಅರಿತರೆ ಶರಣ ಮರೆತರೆ ಮಾನವ  ಎಂಬ ಮಾತನ್ನು ಈ ರೀತಿಯ ರೂಪಕದೊಂದಿಗೆ ಹೋಲಿಸಿ ಮಾನವನಲ್ಲಿನ ಉಚ್ಚ ನೀಚಗಳೆಂಬ ಕುಲಗಳಿಲ್ಲ; ಭೇದವೇನೆ ಇದ್ದರೂ

Correspondence
**ಪ್ರೇಮನಾಥ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ,
ಗು.ವಿ. ಕಲಬುರಗಿ

ಅದು ಅರಿವಿನಲ್ಲಿದೆ. ಅದನ್ನು ಅರಿಯದೆ ಮರೆವಿನ ಮಾಯೆಯಲ್ಲಿರುತ್ತಾನೆ. ಅವನೇ ಮಾನವನಾಗಿರುತ್ತಾನೆ ಎಂದು ತನ್ನ ವಚನಗಳ ಮೂಲಕ ಅನೇಕ ಸೂಕ್ಷ್ಮ ವಿಚಾರಗಳು ವ್ಯಕ್ತಪಡಿಸಿದ್ದಾನೆ.

ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ
ದುರ್ವಾಸ ಮಚ್ಚಿಗ, ದಧೀಚಿಕೀಲಿಗ
ಕಶ್ಯಪ ಕಮ್ಮಾರ, ರೋಮಜ ಕಂಚುಗಾರ
ಕೌಂಡಿಲ್ಯ ನಾವಿದನೆಂಬುದನರಿದು
ಮತ್ತೆ ಕುಲವುಂಟೆಂದು ಛಲಕ್ಕೆ ಹೋರಲೇತಕ್ಕೆ?
ಇಂತೀ ಸಪ್ತ ಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದುದನರಿಯದೆ
ಅಸತ್ಯದಲ್ಲಿ ನಡೆದು ವಿಪ್ರರು ನಾವು ಘನವೆಂದು
ಹೊರುವ ಹೊತ್ತುಹೊಕರ ಮಾತೇತಕ್ಕೆ?
(ಸ.ವ. ಸಂಪುಟ 8, ಪುಟ 420, ವ. 116)

ಈ ವಚನದಲ್ಲಿ ಮಾದಾರ ಚೆನ್ನಯ್ಯನು ಸಪ್ತ ಋಷಿಗಳ ಕುಲದ ಮೂಲವನ್ನು ಋಷಿ-ಮುನಿಗಳೆಲ್ಲ ಬ್ರಾಹ್ಮಣರೆಂಬ ಕಲ್ಪನೆಯಿರಿಸಿಕೊಂಡಿದ್ದ ಈ ದೇಶದಲ್ಲಿ ಅವರೆಲ್ಲಾ ಕೆಳವರ್ಗದವರಿಂದಲೇ ಹುಟ್ಟಿ ಬಂದವರಾಗಿದ್ದರೆಂಬ ಸತ್ಯವನ್ನು ದಲಿತ ಜಾತಿ ಮತ್ತು ಬ್ರಾಹ್ಮಣಿಕೆಯ ಪ್ರತಿರೋಧದಲ್ಲಿ, ಚೆನ್ನಯ್ಯ ಶ್ರೇಷ್ಠತೆಯ ನಿರಾಕರಣೆಯನ್ನು ಮಾಡುತ್ತಾನೆ. ಋಷಿಮುನಿಗಳನ್ನು ಅವರ ಜನ್ಮ ಜಾತಿಯ ಕುಲವನ್ನು ಮುಂದೆ ಮಾಡಿ ಬ್ರಾಹ್ಮಣಿಕೆಯ ವಿರುದ್ಧ ಪ್ರತಿಷ್ಠಾಪಿಸಿರುವುದು ಇಲ್ಲಿಯ ವಿಶೇಷ. ಮೇಲ್ನುದಿಯ ಬ್ರಾಹ್ಮಣ ಶ್ರೇಷ್ಠ ಆತ ತನ್ನ ವೈದಿಕ ಕ್ರೀಯಾಚರಣೆಗಳಾದ ಹವನ, ಹೋಮ, ಯಜ್ಞ ಯಾಗಾದಿಗಳಲ್ಲಿ ಋಷಿಮುನಿಗಳ ಸುತ್ತಿ ಮಾಡುತ್ತಾನೆ. ವಾಸ್ತವವಾಗಿ ಆ ಋಷಿಗಳು ದಲಿತರೇ ಆಗಿದ್ದಾರೆ. ಹಾಗಿದ್ದಾಗ ನಿಮ್ಮ ಕುಲ ಸೂತಕಗಳೂ ಯಾರಿಗೆ, ನಿಮ್ಮ ಪ್ರಾರ್ಥನೆಗಳು ಯಾರಿಗೆ? ಎಂಬ ಪ್ರಶ್ನೆಯನ್ನು ಮಾಡುವುದರ ಮೂಲಕ ಚಾತುರ್ವರ್ಣ ವ್ಯವಸ್ಥೆಯನ್ನು ನೇರವಾಗಿ ತಿರಸ್ಕರಿಸಿದ್ದಾನೆ.

ವ್ಯಕ್ತಿಯ ಸಾಧನೆಯಿಂದ, ಸದ್ವಿನಯದಿಂದ ಮನುಷ್ಯ ದೊಡ್ಡವನಾಗಬಲ್ಲನೇ ಹೊರತು ಕುಲದಿಂದಲ್ಲವೆಂಬ ವಿಚಾರವನ್ನು ಮಾದಾರ ಚೆನ್ನಯ್ಯ ಇಲ್ಲಿ ಉದಾಹರಣೆಗಳೊಂದಿಗೆ ವಿವರಿಸಿದ್ದಾನೆ. ಸಪ್ತಋಷಿಗಳನ್ನು ಸ್ಮರಿಸುವ, ಪೂಜಿಸುವ ವಿಪ್ರರು ಕುಲದ ಮಾತನ್ನೇಕೆ ಆಡುತ್ತಾರೆ, ಮೇಲು-ಕೀಳೆಂದೇಕೆ ಗುರುತಿಸುತ್ತಾರೆ?, ವರ್ಣ ಪದ್ಧತಿಯನ್ನೇಕೆ ಆಚರಿಸುತ್ತಾರೆ? ಎಂಬಂತಹ ಪ್ರಶ್ನೆಗಳು ಇಲ್ಲಿ ಅಡಕವಾಗಿವೆ. ಯಾವ ಚಾತುರ್ವರ್ಣ ವ್ಯವಸ್ಥೆ, ಮನುಷ್ಯರಲ್ಲಿ ಕಂದಕವನ್ನು ನಿರ್ಮಾಣ ಮಾಡಿತ್ತೊ ಅದೇ ಜಾತಿ ವ್ಯವಸ್ಥೆಯನ್ನು ಸೈದ್ಧಾಂತಿಕವಾಗಿ ಮೊಟ್ಟಮೊದಲು ವಿರೋಧಿಸಿದ ಪ್ರಮುಖ ವಚನಕಾರನಾಗಿದ್ದಾನೆ.

ವೇದ ಶಾಸ್ತ್ರಕ್ಕೆ ಹಾರುವನಾಗಿ
ವೀರ ವಿತರಣಕ್ಕೆ ಕ್ಷತ್ರಿಯನಾಗಿ
ಸರ್ವವನಾರೈದು ನೋಡುವಲ್ಲಿ
ವೈಶ್ಯನಾಗಿ ವ್ಯಾಪಾರದೊಳಗಾಗಿ
ಕೃಷಿಯ ಮಾಡುವುದಕ್ಕೆ ಶೂದ್ರನಾಗಿ
ಇಂತಿ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬ
ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ
ಬ್ರಹ್ಮವನರಿದಲ್ಲಿ ಬ್ರಾಹ್ಮಣ
ಸರ್ವಜೀತ ಹಂತ ಕರ್ಮಕ್ಕೊಳಗಾದಲ್ಲಿ ಸಮಗಾರ
ಈ ಉಭಯವನರಿದು ಮರೆಯಲಿಲ್ಲ.
(ಸ.ವ. ಸಂಪುಟ 8, ವ. 1161)

ವೇದಶಾಸ್ತ್ರ ಪುರಾಣಗಳು ನಮ್ಮ ಭಾರತೀಯ ಸಂಸ್ಕೃತಿಯ ತಳಹದಿಯಾಗಿವೆ. ಅವು ಮಾನವನಿಗೆ ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಸೂಚಿಸುತ್ತವೆ. ಈ ವೇದಶಾಸ್ತ್ರ ಪುರಾಣಗಳನ್ನು ಓದಿ ಅರ್ಥೈಸಿಕೊಂಡು ಅವುಗಳ ಜ್ಞಾನಪ್ರಸಾರ ಕೈಗೊಂಡಿರುವವರು ಬ್ರಾಹ್ಮಣರೆಂದು, ಪ್ರಜೆಗಳ, ನಾಗರಿಕರ ರಕ್ಷಣೆ ಹಿತರಕ್ಷಣೆ ಮಾಡುವವರನ್ನು ಕ್ಷತ್ರಿಯರೆಂದು ಜರಿಗೆ ಅವಶ್ಯಕವಾಗಿ ಬೇಕಾಗಿರುವ ವಸ್ತುಗಳ ಸರಬರಾಜು ಮಾಡುವವರನ್ನು ವೈಶ್ಯರೆಂದು, ಹೊಲವನ್ನು ಹದಮಾಡಿ ಬಿತ್ತಿ ಬೆಳೆಯನ್ನು ಉತ್ಪಾದಿಸಿ ಜನಸಾಮಾನ್ಯರಿಗೆ ಹಾಗೂ ಇತರರಿಗೆ ಒದಗಿಸುವ ಕೃಷಿ ಉದ್ಯೋಗ ಕೈಕೊಂಡವರು ಮಾತ್ರ ಶೂದ್ರರೆಂದು ಗುರುತಿಸಲ್ಪಡುತ್ತಿದ್ದರು. ಇದು ಪ್ರಾಚೀನ ಕಾಲದಲ್ಲಿನ ಹಿಂದೂ ಧರ್ಮದ ವರ್ಣವ್ಯವಸ್ಥೆಯಾಗಿತ್ತು. ಈ ವರ್ಣವ್ಯವಸ್ಥೆಯನ್ನು ಸಮಾಜದ ಹಿತದೃಷ್ಟಿಯಿಂದ ಏರ್ಪಡಿಸಲಾಗಿತ್ತು. ಮೊದಮೊದಲು ಈ ವರ್ಣವ್ಯವಸ್ಥೆಯಲ್ಲಿ ಅನುವಂಶಿಕತೆ ಇರಲಿಲ್ಲ. ಬ್ರಾಹ್ಮಣರ ಮಗನಲ್ಲಿ ವೇದಶಾಸ್ತ್ರ ಪುರಾಣಗಳ ಅರಿಯುವ ಶಕ್ತಿಯಿರದೆ ಅವನು ವ್ಯಾಪಾರಿಯಾಗಬಹುದಿತ್ತು. ಮುಂದೆ ಬರುಬರುತ್ತ ವ್ಯಕ್ತಿಯ ಯೋಗ್ಯತೆಯನ್ನು ಅಥವಾ ಸಾಮರ್ಥ್ಯವನ್ನು ಗಣನೆಗೆ ತಂದುಕೊಳ್ಳದೆ ಬ್ರಾಹ್ಮಣರ ಮನೆಯಲ್ಲಿ ವೇದಶಾಸ್ತ್ರಗಳನ್ನು ಅರಿಯದ ಪೆದ್ದ ಮಗನೂ ಕೂಡ ಬ್ರಾಹ್ಮಣನೆಂಬ ವರ್ಚಸ್ಸನ್ನು ಪಡೆದ. ಕಾಲಕ್ರಮೇಣ ಕೃಷಿ ಕಾಯಕ ಮಾಡುವ ಶೂದ್ರ ಹಾಗೂ ಮಾಚ್ಚೆ ಹೊಲಿಯುವ, ಸತ್ತ ದನಗಳನ್ನು ಎತ್ತಿ ಒಗೆಯುವ ಪಂಚಮರನ್ನು ಅಸ್ಪಶ್ಯರೆಂದು ಪರಿಗಣಿಸಲಾಯ್ತು. ಸಮಾಜವನ್ನು ಮೇಲ್ಜಾತಿ, ಕೆಳ ಜಾತಿಯೆಂದು ವಿಭಜಿಸಲಾಯ್ತು.

ಮೇಲ್ವರ್ಗದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಸೇವೆ ಮಾಡುವುದೇ ಶೂದ್ರರ ಕರ್ತವ್ಯವೆಂದು ವಿಧಿಸಲಾಗಿತ್ತು. ಹೀಗೆ ನೀಚ ಕುಲದವರನ್ನು ಜಾತಿಯ ಆಧಾರದ ಮೇಲೆ ಕೆಳತಳ್ಳಲಾಯಿತು. ಇಡೀ ಸಮಾಜವನ್ನು ಶೋಷಕರು ಹಾಗೂ ಶೋಷಿತರು ಎಂಬ ಎರಡು ಬಣಗಳಲ್ಲಿ ವಿಭಜಿಸಲಾಯಿತು. ಈ ಸಾಮಾಜಿಕ ಅನ್ಯಾಯ ಶತಶತಮಾನಗಳ ಕಾಲ ಮುಂದುವರೆಯಿತು. ಶೂದ್ರರಿಗೆ ಪಂಚಮರಿಗೆ ವೇದಶಾಸ್ತ್ರ ಓದುವುದನ್ನಾಗಲಿ, ದೇವಾಲಯ ಪ್ರವೇಶ ಮಾಡುವುದನ್ನಾಗಲಿ ನಿಷೇಧಿಸಲಾಯಿತು. ಇವರನ್ನೆಲ್ಲ ಊರ ಹೊರಗಿನ ಕೇರಿಯಲ್ಲಿ ಇರಿಸಲಾಯಿತು. ಶೂದ್ರರು ಹಾಗೂ ಪಂಚಮರು ಊರ ಪ್ರವೇಶ ಮಾಡಬೇಕಾದಾಗ ಬೆನ್ನ ಹಿಂದೆ ಕಸಬಾರಿಗೆಯನ್ನು ಕಟ್ಟಿಕೊಳ್ಳಬೇಕಾಗಿತ್ತು ನೆಲದ ಮೇಲೆ ಉಗಳಬಾರದೆಂದು ಕೊರಳಲ್ಲಿ ಮಡಿಕೆ ಕಟ್ಟಿಕೊಂಡು ಹೊರಬರಬೇಕಾಗಿತ್ತು ಇಂತಹ ಅಮಾನವೀಯ ಪದ್ಧತಿಗಳು ಜಾರಿಯಲ್ಲಿರುವಂತಹ ಸಂದರ್ಭದಲ್ಲಿ ಸಮಾಜದ ಕೆಳವರ್ಗದ ಜಾತಿಯಲ್ಲಿ ಹುಟ್ಟಿರುವಂತಹ ಮಾದಾರ ಚೆನ್ನಯ್ಯನು ಈ ಅಮಾನವೀಯ ಜಾತಿ ಪದ್ಧತಿಯನ್ನು ಪ್ರತಿಭಟಿಸಿದ್ದಾನೆ.

ಮಾದಾರ ಚೆನ್ನಯ್ಯ ಅಪ್ಪಟ ಶಿವಭಕ್ತನಾದರು ಜಾತಿಯ ವಿಷಯ ಬಂದಾಗ ಅದನ್ನು ಪ್ರತಿಭಟನೆಯ ಮೂಲಕ ವಿರೋಧಿಸುವದನ್ನು ಕಾಣುತ್ತೇವೆ. ಅದಕ್ಕಾಗಿ ಚೆನ್ನಯ್ಯ ಹೇಳುವುದೇನೆಂದರೆ ಜಗತ್ತಿನಲ್ಲಿ ಎರಡೇ ಎರಡು ಕುಲಗಳಿದ್ದು ಅವು ಬೇರೆ ಏನು ಆಗಿರದೆ ಉಚ್ಚ-ನೀಚ ಕುಲಗಳಾಗಿವೆ. ಅವು ಹುಟ್ಟಿನಿಂದ ಬರದೆ ನಾವು ಮಾಡುವ ವೃತ್ತಿಯಿಂದ ಬರುತ್ತವೆಂದು ಮಾದಾರ ಚೆನ್ನಯ್ಯ ತನ್ನ 12ನೇ ಶತಮಾನದ ಸಾಹಿತ್ಯ ಪ್ರಕಾರವಾದ ವಚನಗಳ ಮೂಲಕ ಪ್ರತಿಭಟನಾತ್ಮಕ ಮಾತುಗಳನ್ನಾಡಿರುವದು ಕಾಣುತ್ತೇವೆ.

**ಆಕರ ಗ್ರಂಥಗಳು**


1. ಮಾದಾರ ಚೆನ್ನಯ್ಯನ ಬಹುಮುಖಿ ಅಧ್ಯಯನ - ಡಾ. ಶಿವಾನಂದ ಕೆಳಗಿನಮನಿ
2. ದಲಿತ ವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ.- ಡಾ. ಮ.ನ.ಜವರಯ್ಯ
3. ಮಾದಾರ ಚೆನ್ನಯ್ಯ - ಡಾ. ಬಸವರಾಜ ಸಬರದ
4. ಮಾದಾರ ಚೆನ್ನಯ್ಯ - ವೀರೇಂದ್ರ ಸಿಂಪಿ